ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday, the *18th March 1978, Palguna 27, 1899.* S.E.

The House met in the Assembly Chamber, Vidhana Soudha, at Nine of the Clock.

[Mr. SPEAKER (SRI P. VENKATARAMANA) in the Chair]

OBITUARY REFERENCE

Re: Demise of Sriyuths—

Gl. Sri Nagesh
M. Venkatarangaiah
M. B. Ramaswamy
M. H. Boraiah
M. P. Patil
R. M. Patil
D. Subbanna
W. Hanumanthappa
S. B. Padaki and
A. N. Rama Rao

ಅಧ್ಯಕ್ಷರು ;—ಐದನೆಯ ವಿಧಾನ ಸಭೆಯ ಕಳೆದ ಅಧಿವೇಶನ ಮುಕ್ತಾಯಗೊಂಡ ನಂತರ ನಿಧನ ರಾದ ಕೆಳಕಂಡ ವ್ಯಕ್ತಿಗಳ ಬಗ್ಗೆ ಸಂತಾಪ ಸೂಚಿಸಲು ನಾನು ವಿಷಾದಿಸುತ್ತೇನೆ.

೧) ಮೈಸೂರು ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಜನರಲ್ ಶ್ರೀ ನಾಗೇಶ್ ಅವರು ೨೭-೧೨-೧೯೭೭ ರಂದು ನಿಧನರಾದರು.

೨) ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಎಂ. ವೆಂಕಟಲಿಂಗಯ್ಯ ಅವರು ದಿನಾಂಕ ೭-೧೦-೧೯೭೭ ರಂದು ನಿಧನರಾದರು.

೩) ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಎಂ. ಬಿ. ರಾಮಸ್ವಾಮಿ ಅವರು ದಿನಾಂಕ ೮-೧೦-೧೯೭೭ ರಂದು ನಿಧನರಾದರು.

೪) ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಎಂ. ಎಚ್. ಬೋರಯ್ಯ ಅವರು ದಿನಾಂಕ ೧೩-೧೦-೧೯೭೭ ರಂದು ನಿಧನರಾದರು.

SRI M. H. BEKINALKAR (Sindgi) took oath in the Chambers of Speaker.

೫) ಮಾಜಿ ವಿಧಾನಸಭೆಯ ಸದಸ್ಯರು ಹಾಗೂ ಮಾಜಿ ಕಂದಾಯ ಸಚಿವರಾದ ಶ್ರೀ ಎಂ. ಪಿ. ಪಾಟೀಲ್ ಅವರು ದಿನಾಂಕ ೧೦-೧೦-೧೯೭೭ ರಂದು ನಿಧನರಾದರು.

೬) ಮಾಜಿ ಮೈಸೂರು ವಿಧಾನಸಭಾ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಎಂ. ಆರ್. ಪಾಟೀಲ್ ಅವರು ದಿನಾಂಕ ೧೮ನೇ ಅಕ್ಟೋಬರ್ ೧೯೭೭ರಂದು ನಿಧನರಾದರು.

೭) ಹಿಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಡಿ. ಸುಬ್ಬಣ್ಣ ಅವರು ದಿನಾಂಕ ೧೬-೧೨-೧೯೭೭ರಂದು ನಿಧನರಾದರು.

೮) ಹಿಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಹಾಗೂ ರಾಜ್ಯಾಂಗ ರಚನೆ ಸಭೆಯ ಸದಸ್ಯರಾಗಿದ್ದ ಡಬ್ಲ್ಯೂ. ಎಚ್. ಹನುಮಂತಪ್ಪ ಅವರು ದಿನಾಂಕ ೩೦-೧೨-೧೯೭೭ ರಂದು ನಿಧನರಾದರು.

೯) ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಎಸ್. ಬಿ. ಪದಕಿ ಅವರು ದಿನಾಂಕ ೭-೧-೧೯೭೮ ರಂದು ನಿಧನರಾದರು.

೧೦) ಹಿಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎ. ಎಸ್. ರಾಮರಾಯರು ದಿನಾಂಕ ೧೨-೩-೧೯೭೮ ರಂದು ನಿಧನರಾದರು.

ಶ್ರೀ ಯುತರುಗಳಾದ ಜನರಲ್ ಶ್ರೀ ನಾಗೇಶ್, ಎಂ. ವೆಂಕಟಲಿಂಗಯ್ಯ, ಎಂ. ಬಿ. ರಾಮಸ್ವಾಮಿ, ಎಂ.ವಿಜ್. ಬೋರಯ್ಯ, ಎಂ.ಪಿ. ಪಾಟೀಲ್, ಆರ್.ಎಂ. ಪಾಟೀಲ್, ಎಸ್.ಡಿ. ಸುಬ್ಬಣ್ಣ, ಡಬ್ಲ್ಯೂ. ಹೆಚ್. ಹನುಮಂತಪ್ಪ, ಎಸ್.ಬಿ. ಪದಕಿ ಹಾಗೂ ಎ. ಎಸ್. ರಾಮರಾವ್ ಅವರುಗಳ ನಿಧನದ ಬಗ್ಗೆ ಸಂತಾಪ ಸೂಚಿಸುವಲ್ಲಿ ಮತ್ತು ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆಯ ಸಂತಾಪವನ್ನು ವ್ಯಕ್ತಪಡಿಸುವಲ್ಲಿ ತಾವೆಲ್ಲರೂ ನನ್ನೊಡನೆ ಭಾಗವಹಿಸುವಂತೆ ಕೋರುತ್ತೇನೆ.

ತಾವೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸುವ ಮೂಲಕ ದಿವಂಗತರಿಗೆ ಗೌರವ ವನ್ನು ಸೂಚಿಸಬೇಕೆಂದು ಕೋರುತ್ತೇನೆ.

The House stood in silence for a Minute.

RECOGNITION OF THE JANATA PARTY AND SRI S. R. BOMMAI, AS ITS LEADER IN THE HOUSE

ANNOUNCEMENT

MR. SPEAKER.—I have received a communication from the Secretary of the Karnataka Pradesh Janata Party stating that Sri S. R. Bommai, a member of the House has been elected the Leader of the Karnataka Legislature Janata Party. The Janata Party in the House has a strength of 59 members. I, therefore, recognise the Janata Party as a Party in the House. As the Janata Party has the largest number of members in Opposition, I recognise Sri S.R. Bommai as the Leader of Opposition in the House.